ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದಕ್ಕೆ ನನ್ನ ಸಹಮತ ಇದೆ. ಇದು 1998ರಿಂದ ಪ್ರಾರಂಭವಾಗಿದೆ. ಆಗಿನಿಂದಲೂ ಕೂಡ ಅವ್ಯವಹಾರ ನಡೆದಿದೆ. 1998ರಿಂದ ಟೆಂಡರ್ ಕೊಡುವುದರಲ್ಲಿ ಇರಬಹುದು ಅಥವಾ ಕಳಪೆ ಕಾಮಗಾರಿ ನಡೆದಿರುವುದು ಇರಬಹುದು ಅಥವಾ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದು ಇರಬಹುದು, ಇವೆಲ್ಲವುಗಳ ಬಗ್ಗೆ ಒಂದು ಸಿ.ಓ.ಡಿ. ತನಿಖೆ ಮಾಡಬೇಕೆಂದು ಕೋರುತ್ತೇನೆ. 50 ಲಕ್ಷ ರೂಪಾಯಿಗಳ ಕ್ರಿಕೆಟ್ ಬೆಟ್ಟಿಂಗ್ ವಿಷಯದಲ್ಲಿ ಸಿ.ಬಿ.ಐ. ತನಿಖೆ ಮಾಡಲಾಗಿದೆ. ಆದರೆ ಇಲ್ಲಿ 120 ಕೋಟಿ ರೂಪಾಯಿಗಳಲ್ಲಿ 40 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಆದ್ದರಿಂದ ಇದರ ಬಗ್ಗೆ ಸಮಗ್ರ ತನಿಖೆ ಮಾಡಿ ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆ ಹಚ್ಚಲು ಇದನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಬೇಕು ಎಂದು ಕೋರುತ್ತೇನೆ. ಅಟ್ಲಾಂಟ ಎನ್ನುವ ಕಂಪನಿಗೆ ಕೊಡಬಾರದು ಎಂದು ಸರ್ವಸದಸ್ಯ ಸಭೆಯಾದ ಕೌನ್ಸಿಲ್‌ನಲ್ಲಿ ತೀರ್ಮಾನವಾಗಿದೆ. ಆದರೆ ಅದು ಹೇಳಿದ ಮೂರನೇ ದಿನ ಅವರಿಗೆ ಟೆಂಡರ್ ಕೊಟ್ಟಿದ್ದಾರೆ. ಮತ್ತೆ ಟೆಂಡರ್ ಕ್ಯಾನ್ಸಲ್ ಮಾಡಿದ್ದಾರೆ. ಆರು ಟೆಂಡರ್ ಅವನ ಹತ್ತಿರ ಇವೆ, ಮೂರು ಮಾತ್ರ ಕ್ಯಾನ್ಸಲ್ ಆಗಿವೆ. ದಯವಿಟ್ಟು ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕು.

ಶ್ರೀ ಎಸ್.ಎಂ. ಕೃಷ್ಣ : 40 ಕೋಟಿ ರೂಪಾಯಿಗಳು ಮಿಸ್‌ಯೂಸ್ ಆಗಿದೆ ಎಂದು ಏನು ಹೇಳುತ್ತಿದ್ದಾರೆ, ಇದರಲ್ಲಿ ಯಾವುದೇ ಸತ್ಯವಿಲ್ಲ. ಇದನ್ನು ನಾನು ಪ್ರಬಲವಾಗಿ ನಿರಾಕರಿಸುತ್ತೇನೆ.

ಶ್ರೀ ಆರ್. ಅಶೋಕ್ : ಈ ಉತ್ತರದಿಂದ ನನಗೆ ತೃಪ್ತಿ ಇಲ್ಲ. ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದಿಂದ ಹೊರ ನಡೆದರು)

ಶ್ರೀ ವಿ. ಸೋಮಣ್ಣ : ಮಾನ್ಯ ಸಭಾಧ್ಯಕ್ಷರೆ, ಯಾವ ಬಾಂಡ್ ರಸ್ತೆ ಕಾಮಗಾರಿಗಳನ್ನು ಪ್ರಾರಂಭ ಮಾಡಿದಿವಿ, ಅದು ಏನಾಗಿದೆ ಎನ್ನುವುದನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ. ಮಾನ್ಯ ಗೌರವಾನ್ವಿತ ಸದಸ್ಯರು 1997ರಲ್ಲಿ ಪ್ರಾರಂಭವಾದ ಕಾಮಗಾರಿಗಳು 125 ಕೋಟಿ ರೂಪಾಯಿಗಳಲ್ಲಿ 40 ಕೋಟಿ ರೂಪಾಯಿಗಳು ಅವ್ಯವಹಾರ ನಡೆದಿದೆ ಎಂದು ಹೇಳುವಾಗ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಇದುವರೆಗೆ 65 ರಿಂದ 70 ಪರ್ಸೆಂಟ್ ಬಿಲ್ ಕೊಟ್ಟಿಲ್ಲ, 26,000 ಗುಂಡಿಗಳು ಎಂದು ಏನು ಹೇಳುತ್ತಿದ್ದಾರೆ, ಅದು ಕೇವಲ ಬಾಂಡ್ ರಸ್ತೆಗಳಲ್ಲಿ ಆದುದು ಅಲ್ಲ. ಇಡೀ ಬೆಂಗಳೂರು ನಗರದಲ್ಲಿ ನಾಲ್ಕೂವರೆ ಸಾವಿರ, ಐದು ಸಾವಿರ ಕಿ.ಮೀ. ದೂರದಲ್ಲಿ ಇರುವ ರಸ್ತೆಗಳಲ್ಲಿ ಆಗಿರಬಹುದು. ಇದಕ್ಕೆ ಬೆಲೆ ನಿಗದಿ ಮಾಡಿ ಚರ್ಚೆಯಾಗಲಿ, ಯಾರೇ ತಪ್ಪಿತಸ್ತ ಅಧಿಕಾರಿಗಳಿದ್ದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡೋಣ. ಕನ್‌ಸಲ್ಟೆನ್ಸಿ ಎಂದು ಮಾಡಿದ ಉದ್ದೇಶ ಗುಣಮಟ್ಟವನ್ನು ಕಾಪಾಡಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಡಾ. ಜೆಸ್ಸೋ ಹೇಳಿದ್ದಾರೆಂದು ಹೇಳುತ್ತಾರೆ, he is one of the consultants. ನಾನು ಅವರ ಸಲಹೆಯನ್ನು ತೆಗೆದುಕೊಂಡು ಮೀಟಿಂಗ್ ಮಾಡಿ ಆಗಿದೆ. ಬೆಂಗಳೂರಿನಲ್ಲಿ ಇಂತಹ ದೊಡ್ಡ ಮಳೆ ಬಿದ್ದಾಗ ಕೂಡ ಕೆಲವು ರಸ್ತೆಗಳು ಉತ್ತಮವಾಗಿವೆ.